**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:07-11-2025**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಕೆ ಪಿ ಕೆ ವಕೀಲರಿಂದ**

ನಾನು ನ್ಯಾಯಾಲಯದಲ್ಲಿ ಹಲವಾರು ಕೇಸ್ ಗಳಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಕಾಲದಿಂದಲೂ ಆನಂತರ ನನ್ನ ತಂದೆ ಮತ್ತು ನಾವು ಸ್ವಾಧೀನದಲ್ಲಿರುವುದರಿಂದ ನಮ್ಮ ಪೂರ್ವಿಕರು 65 ವರ್ಷಗಳಿಂದ ಸ್ವಾಧೀನದಲ್ಲಿ ಇದ್ದರು. ನಾವು ಈ ನ್ಯಾಯಾಲಯದಲ್ಲಿ ಆದ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ದಾಖಲಾತಿ ಸಲ್ಲಿಸಿಲ್ಲ. ಮೇಲ್ಮನವಿ ಸಂಖ್ಯೆ ಗೊತ್ತಿಲ್ಲ. ನಾವು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಪೋಡ್ ಆದ ನಂತರ ಸರ್ವೆ ನಂಬರ್ ನೀಡುತ್ತಾರೆ. ದಾವ ಸರ್ವೆ ನಂಬರ್ ನಲ್ಲಿ ಒಟ್ಟು 2 ಪೋಡ್ ಆಗಿರುತ್ತವೆ. ಒಂದು ಪೋಡ್ ವಾದಿಯರಿಗೆ ಮತ್ತೊಂದು ಪೋಡ್ ಪ್ರತಿವಾದಿಯರಿಗೆ ಆಗಿರುತ್ತದೆ.

ಸ ನಂ 97 ಒಟ್ಟು 6 ಎಕರೆ 31 ಗುಂಟೆ ಇದೆ ಎಂದರೆ ಸರಿ. ಪ್ರತಿವಾದಿಯರ ಅಜ್ಜನಿಗೂ ಒಂದು ಪೋಡ್ ಆಗಿದೆ ಎಂದರೆ ಸರಿಯಲ್ಲ. ಒಂದು ಜಮೀನಿನ ಪೋಡ್ ಗಳು ಅಕ್ಕಪಕ್ಕದಲ್ಲಿ ಆಗುತ್ತದೆ ಎಂದರೆ ಸರಿ. ಒಂದನೇ ಪೋಡ್ ನಲ್ಲಿ ನಮಗೆ 2 ಎಕರೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಒಂದನೇ ಪೋಡ್ ನಲ್ಲಿ ನನಗೆ 4 ಎಕರೆ 22 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. 2 ನೇ ಪೋಡ್ ನಲ್ಲಿ ಪ್ರತಿವಾದಿಯರಿಗೆ 2 ಎಕರೆ 9 ಗುಂಟೆ ಬಂದಿರುತ್ತದೆ ಎಂದರೆ ಸರಿ. 4 ಎಕರೆ 22 ಗುಂಟೆಗೆ ಸರ್ವೆ ನಕಾಶೆಯಾಗಿರುತ್ತದೆ. ನಮ್ಮ ಮತ್ತು ಪ್ರತಿವಾದಿಯವರ ಜಮೀನುಗಳ ಬೊಂಡರಿಗಳನ್ನು ಅಳತೆ ಮಾಡಿ ಗಡಿ ಗುರುತಿಸಿರುತ್ತಾರೆ. ಸರ್ವೆ ಇಲಾಖೆಯವರು ಅಳತೆ ಮಾಡಿ ಗಡಿ ಗುರುತಿಸಿರುತ್ತಾರೆ. ಯಾವುದೇ ಪಕ್ಕ ಪೋಡ್ ಆಗಿಲ್ಲ ಎಂದರೆ ಸರಿಯಲ್ಲ. ಅಂದಾಜಿನ ಮೇಲೆ ನಾನು ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯವರು ತಮ್ಮ ಜಮೀನಿನನ್ನು ಅನಂತರಾಮಯ್ಯ ರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಮಗೆ ಜಮೀನು ಸರ್ಕಾರದಿಂದ 1975-76 ರಲ್ಲಿ ಮಂಜೂರಾತಿ ಆದೇಶದಿಂದ ಬಂದಿರುತ್ತದೆ. ಬ್ಲಾಕ್ ನಂಬರ್ ಮತ್ತು ಪೋಡ್ ನಂಬರ್ ಬೇರೆ ಬೇರೆಯಾಗಿರುತ್ತದೆ. ಬ್ಲಾಕ್ ನಂಬರ್ ನೀಡಿದ ನಂತರ ಪೋಡ್ ನಂಬರ್ ಆಗುತ್ತದೆ. ನನ್ನ ದಾವೆಯಲ್ಲಿ ಬ್ಲಾಕ್ ನಂಬರ್ 77 ರಲ್ಲಿ 2 ಗುಂಟೆ ಬಂದಿರುತ್ತದೆ ಎಂದು ಬರೆಸಿರುತ್ತೇನೆ

ಎಂದರೆ ಸರಿ. ಬ್ಲಾಕ್ ನಂಬರ್ 23 ರಲ್ಲಿ 2 ಎಕರೆ 20 ಗುಂಟೆ ಬಂದಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಬ್ಲಾಕ್ 77 ಮತ್ತು 23 ರನೇ ಬ್ಲಾಕ್ ನಂಬರ್ ಬೇರೆ ಬೇರೆ ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿ 2 ಒಟ್ಟಾಗಿ ಇರುತ್ತದೆ ಎಂದು ನುಡಿಯುತ್ತಾರೆ. ಬ್ಲಾಕ್ ನಂಬರ್ 77 ರ ನಂತರ ಬ್ಲಾಕ್ ನಂಬರ್ 78 ಬರಬೇಕು ಎಂದರೆ ಸಾಕ್ಷಿ ಸರ್ಕಾರದ ಆದೇಶದಂತೆ ಅವರು 77 ಮತ್ತು 23 ಅಕ್ಕಪಕ್ಕ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಬ್ಲಾಕ್ ನಂಬರ್ 77 ಮತ್ತು 23 ರ ನಡುವೆ ಬೇರೆ ಬೇರೆ ಬ್ಲಾಕ್ ನಂಬರ್ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ತಹಸೀಲ್ದಾರ ರವರು ಸ್ಥಳ ತನಿಖೆ ಮಾಡಿದ ನಂತರ ಶಾನುಬೋಗರು ತಹಸೀಲ್ದಾರ ರವರಿಗೆ ವರದಿ ನೀಡಿದ್ದು ಆ ಪ್ರಕಾರ ಜಮೀನು ನಮಗೆ ಮಂಜೂರಾಗಿರುತ್ತದೆ. ನಮ್ಮ ಜಮೀನನ್ನು ಕಲ್ಲು ಹಾಕಿ ಚೌಕಟ್ಟು ಮಾಡಿರುತ್ತೇವೆ. ಸರ್ವೆ ಅಧಿಕಾರಿಗಳು ಸಹ ಸ್ಥಳಕ್ಕೆ ಬಂದಿರುತ್ತಾರೆ. ಪ್ರತಿವಾದಿಯವರ ಸರ್ವೆ ನಂಬರ್ 97 ಆಗಿರುತ್ತದೆ ಎಂದರೆ ಸಾಕ್ಷಿ 97/2 ಆಗಿರುತ್ತದೆ ಎಂದು ನುಡಿಯುತ್ತಾರೆ. ಪಹಣಿಗಳಲ್ಲಿ ವಾದಿಯರ ಮತ್ತು ಪ್ರತಿವಾದಿಯರ ಹೆಸರು ಜಂಟಿಯಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. 1972-73 ರ ಸಾಲಿನ ಕೈ ಪಹಣಿಯಲ್ಲಿ 1 ನೇ ವಾದಿ ಗಂಡ ಕೆಂಗಯ್ಯ ರವಗೆ 2 ಎಕರೆ ಮಾತ್ರ ನಮೂದಾಗಿದೆ ಎಂದರೆ ಸರಿಯಲ್ಲ. ವಾದಿಯರಿಗೆ 2 ಎಕರೆ 18 ಗುಂಟೆ ಮಾತ್ರ ಜಮೀನು ಇದ್ದು, ಉಳಿದ 2 ಎಕರೆ ಪ್ರತಿವಾದಿಯವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಆ ಬಗ್ಗೆ ಪ್ರತಿವಾದಿಯವರ ಪರ ಶಾಶ್ವತ ನಿಷೇದಾಜ್ಞೆ ಆಗಿರುತ್ತದೆ ಎಂದರೆ ಸರಿಯಲ್ಲ.

ನಿ ಪಿ 1 ನೋಂದಣಿ ಆಗಿಲ್ಲ. ನಿ ಪಿ 2 ರಲ್ಲಿ ಸ ನಂ 23 ರಲ್ಲಿ 2 ಎಕರೆ 20 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಅದು ಬ್ಲಾಕ್ ನಂಬರ್ 23 ಆಗಿರುತ್ತದೆ ಎಂದು ನುಡಿಯುತ್ತಾರೆ. ಸ ನಂ 77 ರಲ್ಲಿ 2 ಎಕರೆ ಹೊಲ ಎಂದು ನಮೂದಾಗಿದೆ ಎಂದರೆ ಅದು ಸರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ ಪಿ 3 ರಲ್ಲಿ ಬಸವಯ್ಯ ಉರೂಫ್ ಕೆಂಗಯ್ಯ ರವರಿಗೆ 4 ಎಕರೆ 18 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಿ ಪಿ 4 ರಲ್ಲಿ ಸ್ವಾಧೀನ ಅನಂತರಾಮಯ್ಯ ಮತ್ತು ವಾದಿಯರ ಜಂಟಿ ಎಂದು ನಮೂದಾಗಿದೆ ಎಂದರೆ ಸರಿ. ನಿ ಪಿ 6 ರಲ್ಲಿ ಸ ನಂ 97/1 ರಲ್ಲಿ ಬಸವಯ್ಯ ಉರೂಫ್ ಕೆಂಗಯ್ಯ ಎಂದು ನಮೂದಾಗಿದೆ ಎಂದರೆ ಸರಿಯಲ್ಲ ಮತ್ತು 97/2 ಎರಡು ಆಸ್ತಿಗಳು ನಮೂದಾಗಿದೆ ಎಂದರೆ ಸರಿಯಲ್ಲ. ನಮ್ಮ ವಾದ ಪತ್ರದಲ್ಲಿ ಬಸವಯ್ಯ ಉರೂಫ್ ಕೆಂಗಯ್ಯ ಎಂದು ನಮೂದಾಗಿಲ್ಲ ಎಂದರೆ ಸರಿ.

ನಿ ಪಿ 5 ರಲ್ಲಿ ಬಸವಯ್ಯ ಉರೂಫ್ ಕೆಂಗಯ್ಯ ಎಂಬುದನ್ನು ‘ ಗ ‘ಅಕ್ಷರವನ್ನು ತಿದ್ದಿರುತ್ತೇವೆ ಎಂದರೆ ಸರಿಯಲ್ಲ. ನಿ ಪಿ 8 ಮತ್ತು 9 ರಲ್ಲಿ ನಮ್ಮ ಹಕ್ಕುದಾರಿಗೆ ತೋರಿಸಲು ಯಾವುದೇ ನಮೂದು ಇಲ್ಲದಿದ್ದರೂ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 10 ರ ಪ್ರಕಾರ ನಮ್ಮ ಹೆಸರಿನಲ್ಲಿ ಆಕಾರ್ ಬಂದ್ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿ. ನಿ ಪಿ 11 ರಲ್ಲಿ ಅನಂತರಾಮಯ್ಯ ರವರ ಹೆಸರು ಜಂಟಿ ಸ್ವಾಧೀನದಲ್ಲಿ ಇದೆ ಎಂದು ನಮೂದಾಗಿದೆ ಎಂದರೆ ಸರಿ. ಅನಂತರಾಮಯ್ಯ ರವರ 2 ಎಕರೆ ಜಮೀನನ್ನು ಪ್ರತಿವಾದಿಯವರು ಖರೀದಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಒಂದು ವೇಳೆ ಪೋಡ್ ಆಗಿದ್ದರೆ ಪ್ರತ್ಯೇಕ ಪಹಣಿಗಳು ಆಗುತ್ತವೆ ಎಂದರೆ ಸಾಕ್ಷಿ ಪ್ರತ್ಯೇಕ ಪೋಡ್ ಆಗಿರುವುದರಿಂದ ನಮ್ಮ ಹೆಸರಿಗೆ ಪ್ರತ್ಯೇಕ ಪಹಣಿ ಬಂದಿರುತ್ತದೆ ಎಂದು ನುಡಿಯುತ್ತಾರೆ.

ನಿ ಪಿ 11 ಆದೇಶದ ಪ್ರಕಾರ ನಮಗೆ 2 ಎಕರೆ, ಪ್ರತಿವಾದಿಯವರಿಗೆ 2 ಎಕರೆ 9 ಗುಂಟೆ, ಉಳಿದ ಜಮೀನು ಪ್ರತಿವಾದಿಯವರ ಅಜ್ಜನ ಜಮೀನು ಆಗಿರುವ ಬಗ್ಗೆ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯವರ 2 ಎಕರೆ 9 ಗುಂಟೆಯಲ್ಲಿ 9 ಗುಂಟೆ ಕರಾಬು ಆಗಿರುತ್ತದೆ ಎಂದರೆ ಸರಿ. ನಿ ಪಿ 15 ಆದೇಶ ಪ್ರತಿವಾದಿಯವರ ಅಜ್ಜನ ಆಸ್ತಿಗೆ ಸಂಬಂಧಪಟ್ಟ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ನಿ ಪಿ 21 ಪ್ರತಿವಾದಿಯವರಿಗೆ ಮಂಜೂರಾದ ಪತ್ರವಾಗಿದ್ದು, ಅದನ್ನು ನಾವು ಸ ನಂ 97/1 ಎಂದು ತಿದ್ದುಪಡಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**
**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಹಿ/-**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**